JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಅಳಿವಿನಂಚಿನಲ್ಲಿರುವ ಭಾರತೀಯ ಸಂಸ್ಕೃತಿ

**ಶ್ರೀ ಶಿವಕುಮಾರ.ಜಿ,**

ಉಪನ್ಯಾಸಕರು

ಕನ್ನಡ ಅಧ್ಯಯನ ವಿಭಾಗ

ವಿ.ಶ್ರೀ.ಕೃ.ವಿ.,ಸ್ನಾತಕೋತ್ತರ ಕೇಂದ್ರ,ನಂದಿಹಳ್ಳಿ-583119
ಸಂಡೂರು ತಾ||,ಬಳ್ಳಾರಿ ಜಿಲ್ಲೆ
shivukumargpr@gmail.com

***ಸಾರಾಂಶ:*** ಮಾನವನು ತನ್ನ ಭಾವನೆಗಳಿಗೆ ರೂಪವನ್ನು ಕೊಡಲು ನೆರವಾಗುವ ಮಾತುಗಾರಿಕೆಯ ಮೇಲೆ ಸಂಸ್ಕೃತಿಯ ಮುದ್ರೆ ಬಲವಾಗಿರುತ್ತದೆ. ಹಾಗೆಯೇ ನಾಡಿನ ನಾಟಕ, ಗೀತೆ, ಶಿಲ್ಪ, ಮೊದಲಾದ ಕೃತಿಗಳ ಮೇಲೆಯೂ ಪರಿಣಾಮ ಉಂಟಾಗುತ್ತದೆ. ಇವುಗಳ ಒಟ್ಟು ಮೊತ್ತ ಆ ಕಾಲದಲ್ಲಿ ಬದುಕಿರುವವರ ಮೇಲೂ ಕಾಣಿಸುತ್ತದೆ. ಹೀಗಾಗಿ ಒಂದು ಜನಾಂಗದ ತನ್ನ ತನವನ್ನು ವಿಶಿಷ್ಟವಾಗಿ ಉಳಿಸುವ ಸಂಸ್ಕೃತಿಯ ವಿಚಾರದಲ್ಲಿ ಹೆಮ್ಮೆ ಪಡುವುದು ಸ್ವಾಭಾವಿಕ. ಒಂದು ಜನವರ್ಗ, ಇನ್ನೊಂದು ಜನವರ್ಗದಿಂದ ಬೇರೆಯಾಗಿದೆಯೆಂಬುದನ್ನು ಗುರುತಿಸಿ, ತೋರಿಸಬಲ್ಲ ಶಕ್ತಿ ಸ್ವರೂಪವೇ ಸಂಸ್ಕೃತಿ. ಹಾಗೇ ಒಂದು ಸಂಸ್ಕೃತಿಯಲ್ಲಿ ಅದ್ದಿ ಬೆಳೆದವನಿಗೆ ತನ್ನ ಸಂಸ್ಕೃತಿಯ ಅರಿವು ಆಗದೇ ಹೋದರೂ ಪರಕೀಯ ಸಂಸ್ಕೃತಿಯನ್ನು ಕಂಡಾಗ ತನ್ನ ಜೀವನದ ರೀತಿ ನೀತಿಗೂ ಅಭಿರುಚಿಗೂ ಅನ್ಯರದಕ್ಕೂ ಇರುವ ಅಂತರವು ಅವರ ಮಾತು, ನಡತೆ, ಮಾನಸಿಕ ತೀರ್ಮಾನಗಳಲ್ಲಿ ಹೊಡೆದು ಕಾಣುತ್ತದೆ.ಈ ರೀತಿಯಾಗಿ ಇದ್ದ ಭಾರತೀಯ ಸಂಸ್ಕೃತಿ ಇಂದಿಗೆ ಅಳಿವಿನತ್ತ ಹೋಗುತ್ತಿರುವುದು ನಮ್ಮ ದುರ್ದೈವ. ಅತೀ ಪುರಾತನ ಸಂಸ್ಕೃತಿ ಎಂದರೆ ಭಾರತೀಯ ಸಂಸ್ಕೃತಿ. ಅದನ್ನು ಉಳಿಸಿಕೊಳ್ಳಲು ನಾವು ಎಷ್ಟರಮಟ್ಟಿಗೆ ಪ್ರಯತ್ನಿಸುತ್ತಿದ್ದೇವೆ ಎಂಬುದು ಬಹಳ ಮುಖ್ಯ.

***ಮುಖ್ಯ ಪದಗಳು- ಭಾರತೀಯ ಸಂಸ್ಕೃತಿ ,ಸಂಸ್ಕೃತಿಯ ಮುದ್ರೆ.***

**ಪೀಠಿಕೆ:**

ಸಂಸ್ಕೃತಿ ಎಂಬುದಕ್ಕೆ ಒಬ್ಬೊಬ್ಬರು ಒಂದೊಂದು ವ್ಯಾಖ್ಯಾನ ನೀಡಿದ್ದಾರೆ. ಅದರಲ್ಲಿ ಶಿವರಾಮ ಕಾರಂತರು ಹೇಳಿರುವಂತೆ ಸಂಸ್ಕೃತಿ ಎಂಬುದು ಒಂದೆರಡು ದಿನಗಳಲ್ಲಿ ಮೊಳೆತು, ಚಿಗುರಿ, ಹೂಬಿಟ್ಟು ಫಲವನ್ನೀಯುವ ಘಟನೆಯಲ್ಲ. ಬದಲು, ಅನೇಕ ಶತಮಾನಗಳಲ್ಲಿ ಅಲ್ಲಿನ ಜೀವನವು ನಡೆದು ಬಂದುದರ ಪರಿಣಾಮದ ಫಲ. ಜನರ ಊಟ, ಪಾಠ, ಉಡುಗೆ, ತೊಡುಗೆ, ನಂಬಿಕೆ, ತತ್ವಜ್ಞಾನ ಇವೆಲ್ಲಾ ಅವರ ಒಟ್ಟು ಬದುಕಿನ ಸಾರಸರ್ವಸ್ವವಾಗುತ್ತದೆ. ಇವು ಬಹುವಾಗಿ ಜನಗಳ ಅನುಸರಿಸಿ ಬಂದಿರುವ ಮತ, ನಂಬಿಕೆಗಳಿಂದ ಹುಟ್ಟಿ, ಬಂದವು. ಪರಂಪರೆಯಿಂದ ಮೂಡಿ, ಬೆಳೆದು ಒಂದು ಬಗೆಯ ಸಂಪ್ರದಾಯಿಕತೆಯಿಂದ, ಅನುಕರಣೆಯಿಂದ, ಆಚರಣೆಯಿಂದ ಬಂದು ಬದುಕುವಂಥವು.

ಮಾನವನು ತನ್ನ ಭಾವನೆಗಳಿಗೆ ರೂಪವನ್ನು ಕೊಡಲು ನೆರವಾಗುವ ಮಾತುಗಾರಿಕೆಯ ಮೇಲೆ ಸಂಸ್ಕೃತಿಯ ಮುದ್ರೆ ಬಲವಾಗಿರುತ್ತದೆ. ಹಾಗೆಯೇ ನಾಡಿನ ನಾಟಕ, ಗೀತೆ, ಶಿಲ್ಪ, ಮೊದಲಾದ ಕೃತಿಗಳ ಮೇಲೆಯೂ ಪರಿಣಾಮ ಉಂಟಾಗುತ್ತದೆ. ಇವುಗಳ ಒಟ್ಟು ಮೊತ್ತ ಆ ಕಾಲದಲ್ಲಿ ಬದುಕಿರುವವರ ಮೇಲೂ ಕಾಣಿಸುತ್ತದೆ. ಹೀಗಾಗಿ ಒಂದು ಜನಾಂಗದ ತನ್ನ ತನವನ್ನು ವಿಶಿಷ್ಟವಾಗಿ ಉಳಿಸುವ ಸಂಸ್ಕೃತಿಯ ವಿಚಾರದಲ್ಲಿ ಹೆಮ್ಮೆ ಪಡುವುದು ಸ್ವಾಭಾವಿಕ. ಒಂದು ಜನವರ್ಗ, ಇನ್ನೊಂದು ಜನವರ್ಗದಿಂದ ಬೇರೆಯಾಗಿದೆಯೆಂಬುದನ್ನು ಗುರುತಿಸಿ, ತೋರಿಸಬಲ್ಲ ಶಕ್ತಿ ಸ್ವರೂಪವೇ ಸಂಸ್ಕೃತಿ. ಹಾಗೇ ಒಂದು ಸಂಸ್ಕೃತಿಯಲ್ಲಿ ಅದ್ದಿ ಬೆಳೆದವನಿಗೆ ತನ್ನ ಸಂಸ್ಕೃತಿಯ ಅರಿವು ಆಗದೇ ಹೋದರೂ ಪರಕೀಯ ಸಂಸ್ಕೃತಿಯನ್ನು ಕಂಡಾಗ ತನ್ನ ಜೀವನದ ರೀತಿ ನೀತಿಗೂ ಅಭಿರುಚಿಗೂ ಅನ್ಯರದಕ್ಕೂ ಇರುವ ಅಂತರವು ಅವರ ಮಾತು, ನಡತೆ, ಮಾನಸಿಕ ತೀರ್ಮಾನಗಳಲ್ಲಿ ಹೊಡೆದು ಕಾಣುತ್ತದೆ.

ಈ ರೀತಿಯಾಗಿ ಇದ್ದ ಭಾರತೀಯ ಸಂಸ್ಕೃತಿ ಇಂದಿಗೆ ಅಳಿವಿನತ್ತ ಹೋಗುತ್ತಿರುವುದು ನಮ್ಮ ದುರ್ದೈವ. ಅತೀ ಪುರಾತನ ಸಂಸ್ಕೃತಿ ಎಂದರೆ ಭಾರತೀಯ ಸಂಸ್ಕೃತಿ. ಅದನ್ನು ಉಳಿಸಿಕೊಳ್ಳಲು ನಾವು ಎಷ್ಟರಮಟ್ಟಿಗೆ ಪ್ರಯತ್ನಿಸುತ್ತಿದ್ದೇವೆ ಎಂಬುದು ಬಹಳ ಮುಖ್ಯ.

## ಸಂಸ್ಕೃತಿಯ ಅಳಿವಿಗೆ ಕಾರಣಗಳು:

ಭಾರತಕ್ಕೆ ಬಂದ ಐರೋಪ್ಯನ್ನರು ಕೇವಲ ನಮ್ಮನ್ನು ಆಳಿದಷ್ಟೇ ಅಲ್ಲದೆ ಅವರ ಸಂಸ್ಕೃತಿಯನ್ನು ನಮಗೆ ಬಳುವಳಿಯನ್ನಾಗಿ ಕೊಟ್ಟು ಹೋದರು. ಅದನ್ನು ಅನುಸರಿಸುವ ನಮ್ಮ ಜನರು ಇತ್ತೀಚಿನ ದಿನಮಾನಗಳಲ್ಲಿ ಅದನ್ನು ಹೆಚ್ಚಾಗಿಯೇ ಉಪಯೋಗಿಸುತ್ತಿದ್ದಾರೆ.

ಬಾರತೀಯರ ಮೇಲೆ ಪರಾಕಿಯರ ಆಕ್ರಮಣದಿಂದಾಗಿ ನಾವು ಅವರ ಮನಮೋಹಕ ಸಂಸ್ಕೃತಿಗೆ ಆಕರ್ಷಣೆಗೊಂಡು ನಮ್ಮ ಜನ ನಮ್ಮ ಸಂಸ್ಕೃತಿಯನ್ನು ಕೊಂಚ ಕೊಂಚ ಮರೆಯುತ್ತಾ ಬಂದರು.

ಪರಾಕಿಯರು ಅವರ ಸಂಸ್ಕೃತಿಯನ್ನು ನಮ್ಮಿಂದ ಒತ್ತಾಯ ಪೂರ್ವಕವಾಗಿ ಆಚರಿಸುವಂತೆ ಮಾಡಿದ್ದು, ಅಕಸ್ಮಾತ್ತಾಗಿ ಮಾಡದೇ ಹೋದರೆ ಅತೀ ಕ್ರೂರವಾದ ಶಿಕ್ಷೆ ನೀಡುವುದು. ಇವುಗಳು ಅಂದಿನ ಕಾರಣಗಳಾದರೆ, ಇವತ್ತಿನ ದಿನಮಾನಗಳಲ್ಲಿ ನಮ್ಮವರೇ ಪರರ ಸಂಸ್ಕೃತಿಗೆ ತಮ್ಮನ್ನು ತಾವು ತೊಡಗಿಸಿಕೊಂಡರು. ಬೇರೆ ದೇಶಗಳಿಗೆ ವಲಸೆ ಹೋಗುವ ಜನ ಮತ್ತೆ ನಾಡಿಗೆ ತಿರುಗಿ ಬರುವಾಗ ಸಂಪೂರ್ಣವಾಗಿ ಪರಾಕಿಯರಾಗಿ ಹಿಂತಿರುಗುತ್ತಾರೆ. ಕಾರಣ ಕೇಳಿದರೆ 'ಟ್ರೆಂಡ್' ಎನ್ನುವ ಯುವ ಪೀಳಿಗೆ.

ನಮ್ಮ ಭಾರತೀಯ ಸಂಸ್ಕೃತೀಯ ಆಚಾರ ವಿಚಾರಗಳಷ್ಟೇ ನಮ್ಮಿಂದ ದೂರವಾಗುತ್ತಿಲ್ಲ ಬದಲಿಗೆ ಕಲೆಯೂ ಕೂಡಾ ನಮ್ಮಿಂದ ದೂರವಾಗುತ್ತಿದೆ. ಕಾರಣ ಏನಾದರೂ ಇರಬಹುದು ಆದರೇ ಪರಿಣಾಮ ಒಂದೇ ನಾವು ನಮ್ಮ ತನವನ್ನು ಕಳೆದುಕ್ಕೊಂಡು ಬದುಕುತ್ತಿದ್ದೇವೆ.

ನಮ್ಮ ದೇಶಿಯ ಸಂಗೀತದ ಸೊಗಡು ಈಗ ಎಲ್ಲಿದೆ?
ಕಲೆ ಎಲ್ಲಿ ಉಳಿದಿದೆ?
ಮಕ್ಕಳ ಆಟಗಳು ಎಲ್ಲಿ ಹೋದವು?
ನಾಟಕಗಳ ಗೀಳು ಎಲ್ಲಿ ಕಣ್ಮರೆಯಾದವು?
ಜನಪದೀಯ ಹಾಡುಗಳು ಎಲ್ಲಿ ಉದುಗಿ ಹೋದವು?

ಈ ರೀತಿಯ ಸಂಸ್ಕೃತಿಗಳು ಭಾರತೀಯರ ತವರುಮನೆಗಳಾಗಿದ್ದವು. ಅವುಗಳು ಈಗ ಎಲ್ಲಿ ಮರೆಯಾದವು. ಹೀಗೆ ನಾವು ನಮ್ಮ ಸಂಸ್ಕೃತಿಯನ್ನು ಮರೆಯುತ್ತಾ ಹೋದರೆ ಮುಂದೊಂದು ದಿನ ನಮ್ಮ ಮಕ್ಕಳಿಗೆ ಸಂಸ್ಕೃತಿಯ ಬಗ್ಗೆ ಅದು ಹಾಗಿತ್ತು, ಇದು ಹೀಗಿತ್ತು ಎಂಬಂತೆ ಅಜ್ಜಿಯ ಕಥೆಯನ್ನು ಹೇಳುವಂತ ಸಂದರ್ಭ ಬರುವುದು ತುಂಬಾ ದೂರ ಏನೂ ಇಲ್ಲ.

ನಮ್ಮ ನಾಡಿನ ಮುಖಂಡರು ಭಾರತೀಯ ಸಂಸ್ಕೃತಿಯನ್ನು ಕುರಿತು ಉದ್ದುದ್ದಾ ಭಾಷಣ ಮಾಡುವುದನ್ನು ನಾವು ಕೇಳುತ್ತಿದ್ದೇವೆ. ಆದರೇ, ಅದನ್ನು ಉಳಿಸಲು, ಚೇತರಿಸಲು, ಎಷ್ಟರ ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದಾರೆ?.

ಇನ್ನುಳಿದಂತೆ ಶೈಕ್ಷಣಿಕ ಕೇಂದ್ರಗಳು ಎಷ್ಟರ ಮಟ್ಟಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಿ ಮಕ್ಕಳಲ್ಲಿ ಜಾಗೃತಿ ಮೂಡಿಸುತ್ತಿದ್ದಾವೆ?

ಎಷ್ಟು ಜನರ ಮನೆಯಲ್ಲಿ ಮಕ್ಕಳಿಗೆ ನಮ್ಮ ನಮ್ಮ ಸಂಸ್ಕೃತಿಯ ಬಗ್ಗೆ ಮನವರಿಕೆಗೊಳಿಸುತ್ತಿದ್ದಾರೆ?
ಇವೆಲ್ಲವುಗಳಿಗೆ ನಮ್ಮಲ್ಲಿ ಉತ್ತರವಿಲ್ಲ.

ಇವತ್ತಿನ ದಿನ ವಿದ್ಯಾವಂತ ಮಧ್ಯಮ ತರಗತಿಯವನ ಮನೆಯನ್ನು ಹೊಕ್ಕರೆ ಅವನು ಬಳಸುವ ವಸ್ತು, ತೊಡುವ ಬಟ್ಟೆ, ಇರುವಮನೆ ದೇಶಿಯವಾದರೂ ದೇಶಿಯದಲ್ಲವಾದ ಚಿತ್ರ, ಕೆತ್ತನೆ, ಶೈಲಿಗಳೆನಿಸದ ಹೊಸತನವನ್ನು ತೋರಿಸಬೇಕೆ? ಅಥವಾ ಸೊಗಸುಗಾರಿಕೆ, ಅಲಂಕಾರಿಕಯಿಲ್ಲದ ಬೋಳುವಸ್ತುಗಳೇ ತುಂಬಿರಬೇಕೆ? ನಮ್ಮ ಹಳೆಯ ವಸ್ತುಗಳಲ್ಲಿ ಅಲಂಕಾರಿಕತೆ ಇಲ್ಲವೆಂದು ಇದರ ಅರ್ಥವೇ? ಅಥವಾ ಅಲ್ಲಿದ್ದ ಸೊಗಸನ್ನು ಮೆಚ್ಚಲಾರದ ಮಹಾನುಭಾವ ಈತ ಎಂದು ಅರ್ಥವೇ?.

ಈ ರೀತಿಯಾಗಿ ನಾವೆ ನಮ್ಮದನ್ನು ನಿರ್ಲಕ್ಷಿಸಿ ಬೇರೆಯವರ ವಸ್ತುಗಳನ್ನು ವ್ಯಾಮೋಹಿಸಿದರೆ, ನಮ್ಮ ತನವನ್ನು ಕಾಪಾಡುವರಾರು? ಹೀಗೆ ಹೇಳುತ್ತಾ ಹೋದರೆ ನಮ್ಮಲ್ಲಿ ಬೇಕಾ ಬೇಡವಾ ಎಂಬ ಪ್ರಶ್ನೆಗಳೇ ಉಳಿಯುತ್ತವೆ ಹೊರತು ಅದಕ್ಕೆ ಉತ್ತರಗಳು ನಮ್ಮಲ್ಲಿ ಸಿಗುವುದಿಲ್ಲ.

ನಮ್ಮ ನಾಡಿನಲ್ಲಿಯೇ ಹುಟ್ಟಿ, ನಮ್ಮ ಹಿರಿಯರಿಗೆಲ್ಲಾ ರುಚಿಸಿ, ಉಳಿದು ಬಂದ ಅನೇಕ ರೀತಿಯ ಕೆತ್ತನೆ, ಚಿತ್ರ, ರೂಪ, ಆಕಾರ, ಪ್ರತಿರೂಪಗಳು ಸಾವಿರಾರು ಇರುವಾಗ ಅವೊಂದೂ ಇಂದಿನ ನಮ್ಮ ಕಣ್ಣಿಗೆ ಸೊಗಸಾಗಿ ಕಾಣುತ್ತಿಲ್ಲ ಎಂದು ಅರ್ಥವೇ? ಮುಂಬೈ ಒಂದರ ಶಾಲೆಯಲ್ಲಿ ಡ್ರಾಯಿಂಗ್ ಪಾಠಕ್ಕೆ ಡಿಸೈನ್, ಪ್ರತಿರೂಪಗಳನ್ನು ಬರೆಯಲು ಕೊಡುವ ಆದರ್ಶಗಳೆಲ್ಲವೂ ಪರದೇಶದವು. ನಮ್ಮ ಹೆಣ್ಣುಮಕ್ಕಳ ಕಸೂತಿಗೆ ಆರಿಸಿಕೊಳ್ಳುವ ಚಿತ್ರಗಳಲ್ಲೆವೂ ದೇಶಿಯವಾದವು. ಅವರುಗಳ ದೇಶೀಯ ಕಸೂತಿ, ವಿನ್ಯಾಸ, ಪ್ರತಿರೂಪಗಳು ಅವರಲ್ಲಿ ಕಾಲಮಾನದಿಂದ ಬೆಳೆದು ಬಂದ ಎಲೆ, ಬಳ್ಳಿ, ಹೂಗಿಡಗಳಿಂದಲೂ, ಅವುಗಳ ಬಣ್ಣಗಳಿಂದಲೂ ಉಂಟಾದವು.. ನಮ್ಮ ನೆಲಗಟ್ಟು, ಆವರಣ ಬಣ್ಣಗಳಿಂದಲೂ, ಉಂಟಾದವು. ಆದರೆ ಈಗಿನ ಒಡವೆ, ಅಲಂಕಾರಿಕ ವಸ್ತುಗಳು ನಮ್ಮ ನಾಡಿನಲ್ಲಿ ಜನ್ಮ ತಾಳಿದಂತವಲ್ಲ.

ನಮ್ಮ ದೇಶದಲ್ಲಿ ಇಂದು ಇಷ್ಟೆಲ್ಲಾ ದೇಶಿಯ ವಸ್ತು, ಶೈಲಿಗಳು ಆಗಿಹೋಗಿ ನಮ್ಮ ಮನ್ನಣೆಯನ್ನು ಬಾಯ್ದೆರೆಯಾಗಿ ಪಡೆಯುತ್ತಿವೆ. ನಮ್ಮ ಸಾರ್ವಜನಿಕ ಕಟ್ಟಡಗಳನ್ನು ಕಟ್ಟುತ್ತಿರುವುದು ನಮ್ಮ ನಾಡಿನಲ್ಲೇ ಆದರೆ ಅವುಗಳನ್ನು ಕಟ್ಟಲು ಅನುಸರಿಸುತ್ತಿರುವ ವಾಸ್ತು ರೇಖೆ, ಶೈಲಿ, ಸ್ತಂಭ, ಮೊದಲಾದವುಗಳೆಲ್ಲಾ ರೋಮ್, ಗ್ರೀಕ್ ದೇಶಗಳಿಂದ ಆಗಮಿಸಿದ್ದವು. ಅವುಗಳನ್ನು ನಾವು ಬಳಸುತ್ತಿರುವ ರೀತಿಯೂ ಅಭಿರುಚಿಗೆಟ್ಟ ದಾರಿ.

ನಮ್ಮಲ್ಲಿರುವ ಶೈಲಿಗಳೆಂದೂ ನಮ್ಮ ನಮ್ಮ ಸಾರ್ವಜನಿಕ ಮಂದಿರಗಳಿಗೆ ಬಾರವೆ? ನಾವು ಅನ್ಯರಿಂದ ಎರವಲುಗಳನ್ನು ಕೊಳ್ಳುತ್ತಿರುವ ಕಮಾನು, ಸ್ತಂಭ, ಶಿಖರಗಳನ್ನು ಅವುಗಳ ಹಿನ್ನೆಲೆ ಮರೆತು ಬಳಸುತ್ತಿರುವುದರಿಂದ

ಆ ಶೈಲಿಗಳ ಸೊಗಸನ್ನು ನಾವು ತೋರಿಸುವವರಾಗಿದ್ದೇವೆ. ಅಂಥ ಪ್ರಯೋಗಗಳು ನಮ್ಮ ಅಭಿರುಚಿ ಹೀನತೆಯನ್ನು, ಅರಸಿಕತನವನ್ನು ಮಾತ್ರ ಸಾರುತ್ತಿವೆ.

ಸಂಸ್ಕೃತಿ ಬಹು ಮಟ್ಟಿಗೆ ಅನುಕರಣೆಯಿಂದಲೇ ಉಳಿಯುವ ಜೀವನದ ಮಿರುಗು ಎಂದ್ದಾಯಿತು. ಅದೇನೆ ಅದರ ಕೊರತೆ. ನಮ್ಮ ಸಂಸ್ಕೃತಿಯನ್ನು ಅರಿತು ಬಳಸುವ, ಬೆಳೆಸುವ, ಅದರ ಅರ್ಥ ಸೊಬಗುಗಳನ್ನು ತಮ್ಮ ಜನಗಳಿಗೆ ತಿಳಿಸುವ ಪ್ರಯತ್ನಗಳು ನಮ್ಮಲ್ಲಿ ಸಾಗದೆಯೇ ಸ್ವಂತವಾದ ಅಭಿರುಚಿಗಳೂ, ನಮ್ಮ ಸಂಸ್ಕೃತಿಯ ಮೇಲಿನ ಗಾಢ ಮಮತೆಯೂ ಬೆಳೆಯಲಾರದು.

ಈ ಪ್ರಯತ್ನವನ್ನು, ಯೂರೋಪಿನ ಹಲವುಗಳು ಬಹು ಚೆನ್ನಾಗಿ ಮಾಡುತ್ತಿವೆ. ಅವರು ತಮ್ಮ ಸಂಸ್ಕೃತಿಯ ವಿವಿಧ ಮುಗಳನ್ನು ತೋರಿಸುವ ಗ್ರಂಥ, ಮ್ಯೂಸಿಯಂಗಳನ್ನು ನಿರ್ಮಿಸಿದ್ದಾರೆ. ಅದರಂತೆ, ಅನ್ಯ ಜನಾಂಗಗಳ ಸಂಸ್ಕೃತಿಗಳನ್ನು ಅಭ್ಯಸಿಸಲು ಪ್ರಯತ್ನ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಅವರು ನಡೆಸುತ್ತಿರುವ ಸಂಶೋಧನೆ, ಅನ್ವೇಷಣೆ, ಕೂಡಿಸಿರುತ್ತಿರುವ ವಸ್ತು ವಿಶೇಷಗಳು ಅವರ ಪ್ರಯತ್ನಕ್ಕೆ ಸಾಕ್ಷಿಯಾಗಿವೆ.

ನಾರ್ವೆ, ಇಂಗ್ಲೇಂಡ್ ಮೊದಲಾದ ದೇಶದವರು ಕೂಡಿ ಹಾಕಿರುವ ತಮ್ಮ ತಮ್ಮ ದೇಶಿಯ ಒಡವೆ, ವಸ್ತುಗಳ ಅಲಂಕಾರತೆಯನ್ನು ಕಾಣುವಾಗ ಇಲ್ಲಿಂದ ಹೋದ ಪ್ರವಾಸಿಗರಿಗೆ, ನಮ್ಮಲ್ಲಿ ಇಂಥವುಗಳನ್ನು ಮಾಡಲಾಗುವುದಿಲ್ಲವೆ ಎನಿಸುತ್ತದೆ.

ಬ್ರಿಟೀಷ್ ಮ್ಯೂಸಿಯಮ್, ಎಮ್ಸ್ಟರಡೇಮಿನ ಟ್ರೊಪೆನ್ ಮ್ಯೂಸಿಯಂ, ಪ್ಯಾರಿಸ್ಸಿನ ಮ್ಯುಸಿಗಿಮೆ ಕೋಪನ್ ಹೇಗ್ ನ್ಯಾಷನಲ್ ಮ್ಯೂಸಿಯಮ್ ಗಳಲ್ಲಿ ಭಾರತೀಯ ಸಂಸ್ಕೃತದ ಪಾರಂಪಾರಿಕ ವಸ್ತುಗಳನ್ನು ನೋಡಿದರೆ ನಮಗೆ ವಿಸ್ಮಯವಾಗುತ್ತದೆ. ನಮ್ಮ ಕೆತ್ತನೆ, ಶಿಲ್ಪ, ಕಸೂತಿ, ಮೊದಲಾದುವಗಳಲ್ಲಿ ಬಳಸಿರುವ ಅಲಂಕಾರಗಳನ್ನು ನಾವು ಬರೆಸಿದಲ್ಲಿ, ಲಕ್ಷಾಂತರ ಸುಂದರ ಮಾದರಿಗಳನ್ನು ಗುರುತಿಸಬಹುದು. ನಾವು ಅಂತಹ ಪ್ರಯತ್ನ ಮಾಡುತ್ತಿದ್ದೇವೆಯೇ? ನಮ್ಮಲ್ಲಿ ಯಾವ ವಸ್ತು ಸಂಗ್ರಾಹಾಲಯಗಳಲ್ಲಿ ಸಂಸ್ಕೃತಿಯ ಬಗ್ಗೆ ಚಿತ್ರಿಸಿದ್ದೇವೆ, ರಚಿಸಿದ್ದೇವೆ?

ನಮ್ಮ ಶಾಲೆಗಳಲ್ಲಿ ಅದಕ್ಕೆ ಸಹಾಯಕವಾದ ಚಿತ್ರ ಶಿಕ್ಷಣವಿದೆಯೇ? ನಮ್ಮ ಕಸುಬುದಾರರ ಮುಂದೆ ಅವರ ಕಸುಬಿಗೊಂದು ದೇಶಿಯ ಸ್ಫೂರ್ತಿ ಬರುವಂಥಹ ವ್ಯವಸ್ಥಿತ ಮಾರ್ಗದರ್ಶನವಿದೆಯೇ? ನಮ್ಮ ಸಿವಿಲ್ ಇಂಜಿನಿಯರ್‌ಗಳಿಗೆ ವಾಸ್ತು ಶೈಲಿಯ, ಸೌಂದರ್ಯಶಾಸ್ತ್ರದ ಅರಿವನ್ನಾದರೂ ಇದೆಯೇ?.
ಹೀಗೆ ನಾವು ನಮ್ಮ ಸಂಸ್ಕೃತಿಯ ಬಗ್ಗೆ ಬರೆಯುತ್ತಾ ಹೋದರೆ ನಮ್ಮ ಮುಂದೆ ಕೇವಲ ಪ್ರಶ್ನೆಗಳೇ ಸಿಗುತ್ತವೆ ಹೊರತು ಅದಕ್ಕೆ ಪೂರಕವಾದ ಉತ್ತರಗಳು ನಮಗೆ ಲಭಿಸುವುದಿಲ್ಲ.

**ಉಪಸಂಹಾರ:**

ನಾನು ಈ ಹಿಂದೆ ತಿಳಿಸಿದಂತೆ ನಮ್ಮ ಸಂಸ್ಕೃತಿ ಎನ್ನುವುದು ಕೇವಲ ಆಚಾರಗಳಲ್ಲ, ಅದು ನಮ್ಮ ಜನರ ಜೀವನಾಡಿ. ಕಲೆ ಸಂಸ್ಕೃತಿ ಎನ್ನುವದು ನಮ್ಮ ಬದುಕು. ನಮ್ಮಲ್ಲಿ ಯಾವುದಕ್ಕು ಕೊರತೆ ಇಲ್ಲ ಎಂಬ ಅಂಶ ಎಲ್ಲರಿಗೂ ತಿಳಿದೇ ಇದೆ, ಆದರೆ ಅದರ ಸದುಪಯೋಗವಾಗುತ್ತಿಲ್ಲ. ಅಜಂತ ಎಲ್ಲೋರದಂತಹ ಕಲೆ, ತಾಜ್ ಮಹಲ್ ಅಂತಹ ವೈಭವ ಕಟ್ಟಡ, ಬೇಲೂರು, ಹಳೇಬೀಡು, ಹಂಪಿ ಯಂತಹ ವಾಸ್ತು ಶಿಲ್ಪಗಳು ಉದಾಹರಣೆ ನೀಡುತ್ತಾ ಹೋದರೆ ಪುಟಗಳೇ ಸಾಲದು. ಅವುಗಳನ್ನು ನಾವು ಇಂದಿಗೆ ಉಳಿಸಿಕೊಳ್ಳುವಲ್ಲಿ ಎಷ್ಟರಮಟ್ಟಿಗೆ ಸಫಲರಾಗಿದ್ದೇವೆ ಎನ್ನುವುದು ಬಹಳ ಮುಖ್ಯ. ಸಂಸ್ಕೃತಿಗೆ ಬಂದಂತೆ ಜನಪದ, ಬಿದಿರಿ ಕಲೆ, ಕಿನ್ನಾಳದ ಕೀಲು ಗೊಂಬೆ, ಚನ್ನಪಟ್ಟನದ ತೊದಲು ಗೊಂಬೆ ಇವುಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಹೊಂದಿತಂಹ ಕಲೆಗಳು ಹಾಗೂ ಅದರಿಂದ ಎಷ್ಟೋ ಜನರ ಜೀವನ ಸಾಗುತ್ತಿತ್ತು.

ಆದರೆ ಇವತ್ತಿನ ದಿನ ಅವುಗಳೆಲ್ಲಾ ಎಲ್ಲಿ ಹೋದವು? ಅವುಗಳನ್ನು ಮಾಡುವವರಿಲ್ಲವೋ ಅಥವಾ ಕೊಂಡುಕೊಳ್ಳುವವರಿಲ್ಲವೋ ಒಂದೂ ತಿಳಿಯದು. ಪರದೇಶದ ವ್ಯಾಮೋಹದಿಂದ ನಮ್ಮ ಯುವಕರು ಉಧ್ಯೋಗಕ್ಕಾಗಿ ಫಾರೀನ್‌ಗಳು ಎಂದೂ ಸುತ್ತಾಡುತ್ತಿದ್ದಾರೆ. 'ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆ ಮಾತಿನಂತೆ ನಮ್ಮ ಸುತ್ತಮುತ್ತನೇ ಎಷ್ಟೋ ದುಡಿಮೆಗಳು ನಮ್ಮ ಕಣ್ಣ ಮುಂದಿದ್ದಾರೂ ನಮಗೆ ಕಾಣುತ್ತಿಲ್ಲ.

ನಮ್ಮ ವಿಶ್ವ ವಿದ್ಯಾಲಯಗಳು ಇಂದು ಕೇವಲ ಡಿಗ್ರಿ ಸರ್ಟಿಫಿಕೇಟ್ ಗಳನ್ನು ಹಂಚುವ ಮನೆಗಳಾಗಿವೆ. ಅವುಗಳಲ್ಲಿ ನಾಳೆಯ ದಿನ ಕೆಲಸ ದೊರಕಿಸಿಕೊಡಬಲ್ಲ ಡಿಗ್ರಿಗಳಿಗೆ ಇರುವ ಗೌರವ, ಸಾಂಸ್ಕೃತಿಕ ವಿಷಯಗಳಿಲ್ಲ. ನಾವು ವಿಶ್ವ ವಿದ್ಯಾಲಯಗಳ ಮದರಿಯನ್ನ ಪಾಶ್ಚಾತ್ಯರಿಂದ ಕಲಿತುದೇನೋ ನಿಜ. ಆದೆ, ಅವರು ಸಾಸ್ಕೃತಿಕ ವಿಷಯಗಳ ಭೋಧನೆಗಾಗಿ ಮಾಡಿರುವ ಏರ್ಪಾಟು, ನಡೆಸುವ ಸಂಶೋಧನೆ, ಒದಗಿಸಿರುವ ಗ್ರಂಥ, ನೇಮಿಸಿರುವ ಪ್ರಾಧ್ಯಾಪಕರ ವರ್ಗ ಇವಗಳನ್ನು ನಾವು ಅನುಸರಿಸುತ್ತಿಲ್ಲ. ಜನ ಜೀವನದ ಸಂಸ್ಕೃತಿ, ಧರ್ಮ, ತತ್ವಜ್ಞಾನ ಇವೇ ಮೊದಲಾದವುಗಳಿಗೆ ಸಂಬಂಧಿಸುವ 'ಜ್ಞಾನಕ್ಕಾಗಿ ಜ್ಞಾನ' ಎಂದು ಬರುವ ಜ್ಞಾನ ಭಿಕ್ಷುಗಳಿಗೆ ನಾವು ತೋರಿಸಿದ ದಾರಿಗಳು ತೀರಾ ಕಡಿಮೆ.

ಈ ನಮ್ಮ ವಿಶ್ವ ವಿದ್ಯಾಲಯಗಳಂತೆಯೇ, ಸಾಂಸ್ಕೃತಿಕ ವಿಚಾರಗಳಲ್ಲಿ ನಮ್ಮ ಮ್ಯೂಸಿಯಂ ಗಳು ಮಾಡಿರುವ ಮತ್ತು ಮಾಡುತ್ತಿರುವ ಕೆಲಸಗಳು ತೀರಾ ಕಡಿಮೆ. ಪಾಶ್ಚಾತ್ಯ ಮ್ಯೂಸಿಯಂಗಳಲ್ಲಿ ಪ್ರಕಟಿಸಿರುವ

ಗ್ರಂಥಗಳು, ನಡೆಸಿರುವ ಸಂಶೋಧನೆಗಳು, ಸಾರ್ವಜನಿಕ ತಿಳಿವನ್ನು ಹೆಚ್ಚಿಸಲು, ಅಭಿರುಚಿ ಬೆಳೆಸಲು ಪ್ರಕಟಿಸುತ್ತಿರುವ ಸಾವಿರಾರು ಅಗ್ಗದ ಚಿತ್ರಗಳು ನಮ್ಮಲ್ಲಿ ಕಂಡುಬರುವುದು ತುಂಬಾ ಕಡಿಮೆ. ನಮ್ಮ ನಾಡಿನಲ್ಲಿ ಇಷ್ಟು ದೊಡ್ಡ ಸಾಂಸ್ಕೃತಿಕ ಸಂಪತ್ತಿದ್ದರೂ ನಮ್ಮ ಮ್ಯೂಸಿಯಂಗಳು ಚೈತನ್ಯ ಶೂನ್ಯ ಸಂಗ್ರಾಹಾಲಯಗಳಾಗಿವೆ.

**ಆಕಾರ ಗ್ರಂಥಗಳು:**

೧) ಕರ್ನಾಟಕ ಸಂಸ್ಕೃತಿ -ದೇವುಡು
೨) ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ -ದೇಜಗೌ
೩) ಸೂರ್ಯ ಸಂಸ್ಕೃತಿ - ಬರಗೂರು ರಾನಮಚಂದ್ರಪ್ಪ
೪) ಶಿವರಾಮ ಕಾರಂತರ ಲೇಖನಗಳು - (ಸಂಪಾದಕಿ) ಬಿ ಮಾಲಿನಿ ಮಲ್ಯ
೫) ಸಂಸ್ಕೃತಿ ಶ್ರಮ ಮತ್ತು ಸೃಜನ ಶೀಲತೆ - ಬರಗೂರು ರಾನಮಚಂದ್ರಪ್ಪ
೬) ಕನ್ನಡ ಪ್ರಜ್ಞೆ - ಬರಗೂರು ರಾನಮಚಂದ್ರಪ್ಪ೭)